# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 21.06.2016 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಗಳು**

## ಪ್ರಾಸ್ತಾವಿಕ

1. ಸಿಂಡಿಕೇಟು ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯಲ್ಲಿ ವಿವಿಧ ವಿಭಾಗಗಳಿಂದ ಬರುವ ವರದಿಯನ್ನು ವಿಭಾಗವಾರು ಕ್ರಮ ಸಂಖ್ಯೆ ನಮೂದಿಸಿ ನೀಡುವ ಬದಲು ಕಾರ್ಯಸೂಚಿ ಪಟ್ಟಿಯಲ್ಲಿ ನಮೂದಿಸಿದ ರೀತಿಯಲ್ಲಿಯೇ ನಮೂದಿಸಬೇಕಾಗಿ ಮಾನ್ಯ ಕುಲಪತಿಯವರು ಸಭೆಯಲ್ಲಿ ಸೂಚಿಸಿದರು.
2. ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸುವಾಗ ಸಂಬಂಧಪಟ್ಟ ಕಾರ್ಯಸೂಚಿಗೆ ಪೂರಕ ದಾಖಲೆಗಳನ್ನು ತಪ್ಪದೇ ಲಗತ್ತಿಸಬೇಕಾಗಿ ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿದರು.
3. ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತುರ್ತು ಸಂದರ್ಭಗಳಲ್ಲಿ ಕಾಲೇಜಿಗೆ ಸಂಬಂಧಿಸಿದ ಕೆಲಸ ಕಾರ್ಯಗಳಿಗೆ ರೂ.10,000/-ದ ವರೆಗೆ ತಗಲುವ ವೆಚ್ಚವನ್ನು ಭರಿಸಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರು ನೀಡಿದರು ಮತ್ತು ಸದರಿ ಖರ್ಚು ವೆಚ್ಚದ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ನಿಗದಿತ ನಮೂನೆಯಲ್ಲಿ ಸಲ್ಲಿಸುವಂತೆ ತಿಳಿಸಿದರು.
4. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಹೊಸದಾಗಿ ಕೆಲವು ಕೋರ್ಸುಗಳನ್ನು ಪ್ರಾರಂಭಿಸುತ್ತಿದ್ದು ಕೊಠಡಿಗಳ ಕೊರತೆಯಿರುವ ಬಗ್ಗೆ ಗಮನಹರಿಸಿ ಇದಕ್ಕೆ ಸಂಬಂಧಪಟ್ಟಂತೆ ಸೂಕ್ತ ಕ್ರಮಕೈಗೊಳ್ಳಲು ವಿಶ್ವವಿದ್ಯಾನಿಲಯದ ಕಾರ್ಯಕಾರಿ ಅಭಿಯಂತರರಿಗೆ ನಿರ್ದೇಶನ ನೀಡಲು ನಿರ್ಣಯಿಸಲಾಯಿತು.
5. ಮುಂದಿನ ಶೈಕ್ಷಣಿಕ ವರ್ಷದಿಂದ ಸ್ನಾತಕೋತ್ತರ ಪರಿಸರ ವಿಜ್ಞಾನ ಕೋರ್ಸನ್ನು ಪ್ರಾರಂಭಿಸುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. ಇದಕ್ಕಾಗಿ Microbiology, Geo-informatics ಮತ್ತು Marine Geology ವಿಭಾಗದ ಕೆಲವು ಪ್ರಾಧ್ಯಾಪಕರುಗಳ ಸೇವೆಯನ್ನು ಬಳಸಿಕೊಳ್ಳಲು ನಿರ್ಣಯಿಸಲಾಯಿತು.
6. 2016-17ನೇಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಿರುವ ಸ್ನಾತಕೋತ್ತರ ಭೂಗೋಳಶಾಸ್ತ್ರ ಕೋರ್ಸಿಗೆ Geo-informatics ಮತ್ತು Marine Geology ವಿಭಾಗದ ಕೆಲವು ಪ್ರಾಧ್ಯಾಪಕರುಗಳ ಸೇವೆಯನ್ನು ಬಳಸಿಕೊಳ್ಳಲು ನಿರ್ಣಯಿಸಲಾಯಿತು.
7. 2016-17ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಿರುವ M.Sc. Medical Physics ಕೋರ್ಸಿಗೆ Physics ವಿಭಾಗದ ಹಾಗೂ USIC, CARRT ಮತ್ತು CARER ಕೇಂದ್ರಗಳ ಕೆಲವು ಪ್ರಾಧ್ಯಾಪಕರುಗಳ ಸೇವೆಯನ್ನು ಬಳಸಿಕೊಳ್ಳಲು ನಿರ್ಣಯಿಸಲಾಯಿತು.
8. 2016-17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಶುಲ್ಕವನ್ನು ಪರಿಷ್ಕರಿಸಿದ್ದು, ಪರೀಕ್ಷಾ ಶುಲ್ಕವನ್ನು ಮಾತ್ರ ಪ್ರಸ್ತುತ ಚಾಲ್ತಿಯಲ್ಲಿರುವಂತೆಯೇ ಮುಂದುವರಿಸಲು ತೀರ್ಮಾನಿಸಲಾಯಿತು

**II ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 10.03.2016ರಂದು ನಡೆದ 2016ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ಅನುಸರಣಾ ವರದಿಗೆ ಪೂರಕವಾಗಿ ಈ ಕೆಳಗಿನಂತೆ ಕ್ರಮಕೈಗೊಳ್ಳಲಾಯಿತು.

   ಅ. ಕಾರ್ಯಸೂಚಿ ಸಂಖ್ಯೆ:ಸಿಂಡಿಕೇಟು:ಸಾ.ಸ.2:41 (2016)ರಲ್ಲಿ skill development centreನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶ್ರೀ ಪ್ರಸನ್ನ ಕುಮಾರ ರೈ ಇವರ ಸಲಹೆಯಂತೆ ಸಭೆಯಲ್ಲಿ ಚರ್ಚಿಸಿ

ಮಾನ್ಯ ಕುಲಪತಿಯವರು ಈ ಬಗ್ಗೆ ಒಂದು ಕೋರ್ ಸಮಿತಿಯನ್ನು ರಚಿಸಿ ಯಾವ ರೀತಿಯಲ್ಲಿ ಕಾರ್ಯಪ್ರವೃತ್ತರಾಗಬಹುದೆಂದು ಯೋಜನೆ ತಯಾರಿಸಿಕೊಳ್ಳಲು ತಿಳಿಸಿದರು.

ಆ. ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ ಸಾಸ.2:3 (2016)ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎರೆಹುಳ ಗೊಬ್ಬರ ಘಟಕ ಸ್ಥಾಪಿಸುವ ಬಗ್ಗೆ ಅನ್ವಯಿಕ ಸಸ್ಯಶಾಸ್ತ್ರ ಮತ್ತು ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗಳ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿಯನ್ನು ರಚಿಸಿ ಒಬ್ಬರನ್ನು ಸಂಯೋಜನರನ್ನಾಗಿ ನೇಮಕಾತಿ ಮಾಡಿಕೊಳ್ಳುವುದಾಗಿ ನಿರ್ಣಯಿಸಲಾಯಿತು.

**I ನಡಾವಳಿಗಳ ದೃಢೀಕರಣ**

1. ದಿನಾಂಕ 23.04.2016ರಂದು ನಡೆದ 2016ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

2. ದಿನಾಂಕ 03.05.2016 ರಂದು ನಡೆದ ಸಿಂಡಿಕೇಟಿನ 2016ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

2. ದಿನಾಂಕ 10.03.2016ರಂದು ನಡೆದ 2016ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ಅನುಸರಣಾ ವರದಿಗೆ ಪೂರಕವಾಗಿ ಈ ಕೆಳಗಿನಂತೆ ಕ್ರಮಕೈಗೊಳ್ಳಲಾಯಿತು.

ಇ. ಕಾರ್ಯಸೂಚಿ ಸಂಖ್ಯೆ:ಸಿಂಡಿಕೇಟು:ಸಾ.ಸ.2:41 (2016)ರಲ್ಲಿ skill development centreನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶ್ರೀ ಪ್ರಸನ್ನ ಕುಮಾರ ರೈ ಇವರ ಸಲಹೆಯಂತೆ ಸಭೆಯಲ್ಲಿ ಚರ್ಚಿಸಿ ಮಾನ್ಯ ಕುಲಪತಿಯವರು ಈ ಬಗ್ಗೆ ಒಂದು ಕೋರ್ ಸಮಿತಿಯನ್ನು ರಚಿಸಿ ಯಾವ ರೀತಿಯಲ್ಲಿ ಕಾರ್ಯಪ್ರವೃತ್ತರಾಗಬಹುದೆಂದು ಯೋಜನೆ ತಯಾರಿಸಿಕೊಳ್ಳಲು ತಿಳಿಸಿದರು.

ಈ. ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ ಸಾಸ.2:3 (2016)ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎರೆಹುಳ ಗೊಬ್ಬರ ಘಟಕ ಸ್ಥಾಪಿಸುವ ಬಗ್ಗೆ ಅನ್ವಯಿಕ ಸಸ್ಯಶಾಸ್ತ್ರ ಮತ್ತು ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗಳ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿಯನ್ನು ರಚಿಸಿ ಒಬ್ಬರನ್ನು ಸಂಯೋಜನರನ್ನಾಗಿ ನೇಮಕಾತಿ ಮಾಡಿಕೊಳ್ಳುವುದಾಗಿ ನಿರ್ಣಯಿಸಲಾಯಿತು.

3. 29.03.2016ರಂದು ನಡೆದ ಸಿಂಡಿಕೇಟಿನ 2016ನೇ ಸಾಲಿನ ಪ್ರಥಮ ವಿಶೇಷ (ಘಟಿಕೋತ್ಸವ) ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ.4:1(2016)

**ವಿಷಯ :** ಅನ್ವಯಿಕ ಸಸ್ಯಶಾಸ್ತ್ರ ವಿಭಾಗ –5 KVA online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿ಼ವಿ ಸಾ.ಸ.4:2(2016)

**ವಿಷಯ :** ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ ವಿಭಾಗ –Audio Vidio ಉಪಕರಣಗಳ ಖರೀದಿಗೆ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 12.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿ಼ವಿ ಸಾ.ಸ.4:3(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ – ಶೋಧಗಂಗಾ ಪ್ರಾಜೆಕ್ಟ್‌ನಡಿ ಗ್ರಂಥಾಲಯದಲ್ಲಿರುವ ಪ್ರೌಢ ಪ್ರಬಂಧ (Theses) ಗಳನ್ನು ಡಿಜಿಟಲೀಕರಣಗೊಳಿಸುವ ವೆಚ್ಚಕ್ಕೆ ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 25.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿ಼ವಿ ಸಾ.ಸ.4:4(2016)

**ವಿಷಯ :** BRNS Project, Dept. of Applied Botany – $CO_2$ Incubator ಖರೀದಿಗೆ ಪ್ರಸ್ತಾವನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 12.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿ಼ವಿ ಸಾ.ಸ.4:5(2016)

**ವಿಷಯ :** ಪ್ರಸಾರಾಂಗ – ಕೊಡವ ಅರ್‌ತೋಲೆ (ಅರ್ಥಕೋಶ) ಎಂಬ ಕೃತಿಯನ್ನು ಮುದ್ರಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 12.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ.4:6(2016)

**ವಿಷಯ :** ಪರೀಕ್ಷಾ ಗಣಕೀಕರಣದ ದತ್ತಾಂಶಗಳನ್ನು ವಿಶ್ವವಿದ್ಯಾನಿಲಯದ ಸುಪರ್ದಿಯಲ್ಲಿ ಕಾಪಿಡಲು 2 ಸಂಖ್ಯೆಯ ಸರ್ವರ್‌ಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 25.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿ಼ವಿ ಸಾ.ಸ.4:7(2016)

**ವಿಷಯ :** ನವೆಂಬರ್ 2015ರ ಬಿ.ಬಿ.ಎಂ. ಪದವಿ ಪರೀಕ್ಷೆಗಳು – ಪರೀಕ್ಷಾ ನಿಯಮವನ್ನು ಉಲ್ಲಂಘಿಸಿರುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪೂರಕ ವರದಿಯ ಕೊರತೆಯಿಂದಾಗಿ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿ಼ವಿ ಸಾ.ಸ.4:8(2016)

ವಿಷಯ : ವಿಶ್ವವಿದ್ಯಾನಿಲಯ ಗ್ರಂಥಾಲಯದShodha Ganga Project ನETD Lab ಗೆ 5 KVA UPS With Battery ಖರೀದಿ ಕುರಿತು.

**ಸಭೆಯ ದಿನಾಂಕ: 21.06.2016**

ನಿರ್ಣಯ : ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:9(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಯುಜಿಸಿ, ಡಿಎಸ್‌ಟಿ ಮತ್ತು ಕೇಂದ್ರ ಸರ್ಕಾರದ ಅನುದಾನ /ಇತರ ಪ್ರಸ್ತಾವನೆಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮ (Follow up action) ಗಳಿಗಾಗಿ "Liaison Officer" ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಸದರಿಯವರನ್ನು ಮಾಸಿಕ ರೂ.20,000/-ಗೌರವಧನದೊಂದಿಗೆ ಮುಂದಿನ ಅವಧಿಗೆ ಮುಂದುವರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:10(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕರ್ನಾಟಕ ಸರಕಾರದ ಅನುದಾನ/ಪ್ರಸ್ತಾವನೆ ಹಾಗೂ ಇತರ ಕೆಲಸ ಕಾರ್ಯಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮಗಳಿಗಾಗಿ ಬೆಂಗಳೂರಿನಲ್ಲಿ Liaison Officer" ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಸದರಿಯವರನ್ನು ಮಾಸಿಕ ರೂ.15,000/-ಗೌರವಧನದೊಂದಿಗೆ ಮುಂದಿನ ಅವಧಿಗೆ ಮುಂದುವರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:11(2016)

ವಿಷಯ : ಶ್ರೀಮತಿ ಪ್ರೀತಿ ಕೀರ್ತಿ ಡಿ'ಸೋಜ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ ದಿನಾಂಕ 16.05.2016 ರಿಂದ 27.05.2016 ರವರೆಗೆ Gaeddu College, Royal University of Bhutan ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪ್ರಸ್ತಾವನೆಯನ್ನು ಮುಂದೂಡಲಾಯಿತು. ಸದರಿಯವರು ಭೂತಾನ್ ವಿಶ್ವವಿದ್ಯಾನಿಲಯದಲ್ಲಿ ಕೈಗೊಂಡ ಶೈಕ್ಷಣಿಕ ಚಟುವಟಿಕೆ, ಪಡೆದ ಸಂಭಾವನೆಮತ್ತು ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಭೂತಾನ್ ವಿಶ್ವವಿದ್ಯಾನಿಲಯದ ನಡುವಿನ ಒಡಂಬಡಿಕೆ ಹಾಗೂ ಸಿಬ್ಬಂದಿ ವಿನಿಮಯ ಇತ್ಯಾದಿಗಳ ಬಗ್ಗೆ ತೆಗೆದುಕೊಂಡ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸಂಬಂಧಪಟ್ಟವರಿಗೆ ತಿಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:12(2016)

ವಿಷಯ : 1996ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ (ಹಿರಿಯ ವೇತನ ಶ್ರೇಣಿ)ಯಿಂದ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ (ಆಯ್ಕೆ ವೇತನ ಶ್ರೇಣಿ) ಪದೋನ್ನತಿ – ನೇಮಕಾತಿ ಮಂಡಳಿ ಸದಸ್ಯರ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.4:13(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಆವರಣ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಭದ್ರತಾ ವ್ಯವಸ್ಥೆಯ ಗುತ್ತಿಗೆ ಅವಧಿ ವಿಸ್ತರಣೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಸದರಿ ಗುತ್ತಿಗೆದಾರರ ಗುತ್ತಿಗೆ ಅವಧಿಯನ್ನು ಅದೇ ದರ ಮತ್ತು ಷರತ್ತಿನೊಂದಿಗೆ ಬದಲಿ ವ್ಯವಸ್ಥೆ ಆಗುವವರೆಗೆ ಮುಂದುವರಿಸುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. ಸದರಿ ಭದ್ರತಾ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ಭವಿಷ್ಯ ನಿಧಿ ಯನ್ನು ಗುತ್ತಿಗೆದಾರರು ಸರಿಯಾಗಿ ಭವಿಷ್ಯ ನಿಧಿ ಸಂಸ್ಥೆಗೆ ಸರಿಯಾಗಿ ಪಾವತಿಮಾಡುತ್ತಿಲ್ಲ ಎಂದು ಕೆಲವು ಸಿಂಡಿಕೇಟು ಸದಸ್ಯರು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಗುತ್ತಿಗೆದಾರರನ್ನು ಕುಲಸಚಿವರು ಕರೆಸಿ ಈ ಬಗ್ಗೆ ವಿವರಗಳನ್ನು ಪಡೆದುಕೊಳ್ಳುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:14(2016)

**ವಿಷಯ :** ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮಂಗಳೂರು ಇಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:15(2016)

**ವಿಷಯ :** ಸ್ವಾಯತ್ತ ಕಾಲೇಜುಗಳನ್ನು ಪರಿಶೀಲಿಸುವ ಕುರಿತು.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:16(2016)

**ವಿಷಯ :** ನಾನ್–ಯುಜಿಸಿ ಸ್ಕೇಲ್‌ನ ಪದವಿ ಶಿಕ್ಷಕರಿಗೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಮೌಲ್ಯಮಾಪನ ಭತ್ಯೆ ಮತ್ತು ಇತರ ವೆಚ್ಚಗಳನ್ನು ಪರಿಷ್ಕರಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 05.05.2016ರಂದು ನಡೆದ ಪರೀಕ್ಷಾ ಕಾರ್ಯಗಳ ಸಂಭಾವನೆ ಪರಿಷ್ಕರಣೆ ಸಮಿತಿ ಸಭೆಯ ನಡವಳಿಯ ಕ್ರಮ ಸಂಖ್ಯೆ 4ರಲ್ಲಿ ಪ್ರತೀ ವರ್ಷಕ್ಕೊಮ್ಮೆ ಶೇಕಡ 10% ರಂತೆ ಹೆಚ್ಚಿಸಲು ಶಿಫಾರಸ್ಸು ಮಾಡಲಾಯಿತು ಎಂಬುದನ್ನು ಕೈಬಿಡಲಾಯಿತು ಉಳಿದಂತೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:17(2016)

**ವಿಷಯ :** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ M.Sc. (Geography) ಕೋರ್ಸನ್ನು ಪ್ರಾರಂಭಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪಾವತಿ ವರ್ಗದಡಿ ವಿಧಿಸಿರುವ ಶುಲ್ಕವನ್ನು ರೂ.20,000/–ಕ್ಕೆ ನಿಗದಿಪಡಿಸಿ ಕೋರ್ಸನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ.4:18(2016)

**ವಿಷಯ :** DBT – Ramalingaswami ಫೆಲೋಶಿಪ್, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ – "Trinocular Stereo –microscope ಮತ್ತು Camera" ವನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 12.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ.4:19(2016)

**ವಿಷಯ :** ಯುಜಿಸಿ ಯೋಜನೆಯಡಿ ದೈಹಿಕ ಶಿಕ್ಷಣ ವಿಭಾಗಕ್ಕೆ ಸ್ಪೋರ್ಟ್ಸ್ ಸೈನ್ಸ್ ಮತ್ತು ಸ್ಪೋರ್ಟ್ಸ್ ಟ್ರೈನಿಂಗ್ ಉಪಕರಣಗಳನ್ನು ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 12.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ.4:20(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಆವರಣ ಜಮೀನುಗಳ ಪರಿಶೀಲನೆಗೆ ಸಂಬಂಧಿಸಿ ದಿನಾಂಕ 18.02.2016ರಂದು ಹಾಗೂ ದಿನಾಂಕ 14.03.2016ರಂದು ನಡೆದ ಜಮೀನು ಪರಿಶೀಲನಾ ಸಮಿತಿ ಸಭೆಯ ನಡಾವಳಿ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಮೇಲಿನ ಪ್ರಸ್ತಾವನೆಗೆ ಸಂಬಂಧಿಸಿದಂತೆ ಶ್ರೀ ಪ್ರಭಾಕರ್, ಉಪನಿರ್ದೇಶಕರು, ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ ಇವರನ್ನು ಎಸ್ಟೇಟ್ ಆಫೀಸರ್ (ರೆವಿನ್ಯೂ) ಆಗಿ ನೇಮಕ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ.4:21(2016)

**ವಿಷಯ :** CARRT ಪ್ರಾಜೆಕ್ಟ್ – ಅನುಮೋದಿತ ದರದಲ್ಲಿ ಕಂಪ್ಯೂಟರ್ ಖರೀದಿ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:22(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವವಿಜ್ಞಾನ ಮತ್ತು ಭೌತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಸ್ನಾತಕೋತ್ತರ ಜೀವವಿಜ್ಞಾನ ಅಧ್ಯಯನ ವಿಭಾಗಕ್ಕೆ ಡಾ.ಎನ್.ಸಿ.ತಾರಾವತಿ, ಸಹ ಪ್ರಾಧ್ಯಾಪಕರು ಹಾಗೂ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರೊ.ವೈ.ನಾರಾಯಣ, ಪ್ರಾಧ್ಯಾಪಕರು ಇವರನ್ನು ಅಧ್ಯಕ್ಷರುಗಳನ್ನಾಗಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:23(2016)

**ವಿಷಯ :** ಸ್ನಾತಕೋತ್ತರ ಜಿಯೋ ಇನ್‌ಫಾರ್ಮೆಟಿಕ್ಸ್ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:24(2016)

**ವಿಷಯ :** ದಿನಾಂಕ 10.03.2016ರಂದು ನಡೆದ ಸಿಂಡಿಕೇಟ್ ಸಭೆಗೆ ಮಂಡಿಸಿದ ಸದಸ್ಯರ ಪ್ರಸ್ತಾವನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಈ ಬಗ್ಗೆ ಯುಜಿಸಿ, ಎಐಸಿಟಿಇ ಕಾರ್ಯದರ್ಶಿಯವರಿಗೆ ಪತ್ರ ಬರೆಯುವುದು ಮತ್ತು ಈ ಕುರಿತು ಕುಲಪತಿಯವರು ಯುಜಿಸಿಯ ಉಪಾಧ್ಯಕ್ಷರೊಡನೆ ಚರ್ಚಿಸುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:25(2016)

**ವಿಷಯ :** ಡಾ.ಟಿ.ಜಯಪ್ರಕಾಶ್ ರಾವ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ, ಹೊಸ ನಿಯಮಾವಳಿಗಳನ್ನು ರೂಪಿಸಲು ಈಗಾಗಲೇ ಕ್ರಮಕೈಗೊಂಡಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಕೃತಿ ಚೌರ್ಯ ಈ ಕುರಿತು ವಿಶ್ವವಿದ್ಯಾನಿಲಯದ ಗ್ರಂಥಪಾಲಕರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು.

ಸ್ನಾತಕೋತ್ತರ ಕೋರ್ಸುಗಳ ಪ್ರಾಜೆಕ್ಟ್ ವರ್ಕ್‌ಗಳಿಗೆ ಸಂಬಂಧಿಸಿದ ಮೌಖಿಕ ಪರೀಕ್ಷೆಗಳಲ್ಲಿ ಬಾಹ್ಯ ವಿಷಯ ತಜ್ಞರನ್ನು ಸಮಿತಿಯಲ್ಲಿ ಒಳಗೊಳ್ಳುವಂತೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:26(2016)

**ವಿಷಯ :** ಶ್ರೀ ಉಮಾಶಂಕರ್ ಎಸ್. ಎಂ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಈ ಕುರಿತು ಕುಲಸಚಿವರು (ಪರೀಕ್ಷಾಂಗ) ಸೂಕ್ತ ಕ್ರಮಕೈಗೊಳ್ಳಲು ನಿರ್ದೇಶಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:27(2016)

**ವಿಷಯ :** ಶ್ರೀ ಹರೀಶ್ ಆಚಾರ್, ಸಿಂಡಿಕೇಟು ಸದಸ್ಯರು ಸಲ್ಲಿಸಿದ ಪ್ರಸ್ತಾವನೆಗಳು

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯ ಕ್ರ.ಸಂ.1ಕ್ಕೆ ಸಂಬಂಧಿಸಿದಂತೆ, ಪಿಎಚ್.ಡಿ ಮಾರ್ಗದರ್ಶಕರ ಆಯ್ಕೆಯಲ್ಲಿ ಏಕರೂಪದ ನೀತಿಯನ್ನು ಅಳವಡಿಸಲು ನಿರ್ಧರಿಸಲಾಯಿತು.

ಪಿಎಚ್.ಡಿ. ಪದವಿಗಾಗಿ ನೋಂದಣಿ ಮಾಡಲು ಅರ್ಹ ವಿದ್ಯಾರ್ಥಿಗಳ ಹಿತಾಸಕ್ತಿಗಾಗಿ ಪ್ರಸ್ತುತ ಇರುವ ಸ್ನಾತಕೋತ್ತರ ಇತಿಹಾಸ ಮತ್ತು ಅರ್ಥಶಾಸ್ತ್ರ ಅಧ್ಯಯನ ಮಂಡಳಿಗಳ ನಿರ್ಧಾರಗಳು ಪೂರಕವಾಗಿಲ್ಲವಾದುದರಿಂದ ಈ ಅಧ್ಯಯನ ಮಂಡಳಿಗಳನ್ನು ಪುನರ್ರಚಿಸಲು ತಕ್ಷಣವೇ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಪ್ರಸ್ತಾವನೆಯ ಕ್ರ.ಸಂ.3ಕ್ಕೆ ಸಂಬಂಧಿಸಿದಂತೆ, ಕಾರ್ಯಕಾರಿ ಅಭಿಯಂತರರಿಗೆ ಕೂಡಲೆ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಕ್ರಮ ಕೈಗೊಳ್ಳುವಂತೆ ತಿಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:28(2016)

**ವಿಷಯ :** ಡಾ.ಪುಷ್ಪ ಕುಟ್ಟಣ್ಣ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ನಿರ್ಣಯ :** ಸದರಿ Vision Statementನಲ್ಲಿ National ಎಂಬ ಪದದೊಂದಿಗೆ International ಎಂಬ ಪದವನ್ನು ಸಹ ಅಳವಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:29(2016)

**ವಿಷಯ :** ಶ್ರೀ ಪ್ರಸನ್ನ ಕುಮಾರ್ ರೈ, ಸಿಂಡಿಕೇಟು ಸದಸ್ಯರು ಸಲ್ಲಿಸಿದ ಪ್ರಸ್ತಾವನೆಗಳು

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಅಲ್ಲದೆ ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಆರೋಗ್ಯ ಚಿತ್ರಣವನ್ನು ತಯಾರಿಸುವ ಕುರಿತು ಕ್ರಮಕೈಗೊಳ್ಳಲು ನಿರ್ಧರಿಸಲಾಯಿತು. ವಾರ್ಷಿಕ ಆರೋಗ್ಯ ತಪಾಸಣಾ ಕ್ಯಾಂಪ್‌ಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಲು ನಿರ್ಣಯಿಸಲಾಯಿತು. ಈ ಕುರಿತು ಕೆಲವು ಸಂಘಟನೆಗಳೊಂದಿಗೆ ಒಡಂಬಡಿಕೆಯನ್ನು ಮಾಡಲು ಕ್ರಮಕೈಗೊಳ್ಳಲು ನಿರ್ಧರಿಸಲಾಯಿತು. ಮಾನ್ಯ ಕುಲಪತಿಯವರು ಪ್ರತಿ ಉದ್ಯೋಗಿಗಳಿಗೆ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ನಿರ್ದೇಶನ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:30(2016)

**ವಿಷಯ :** Necessary maintenance work to the Centenary Building at University College, Mangalore – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:31(2016)

**ವಿಷಯ :** Supplying and commissioning of Diesel Generator Set the Dr. Dayananda Pai building and Management Building at University College, Mangalore – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:32(2016)

**ವಿಷಯ :** Construction of Compound Wall Basement and Compound wall with G.I. wire fence to the site allotted for Mangalore University P.G. Centre at Belapu Village, Udupi District – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:33(2016)

**ವಿಷಯ :** Providing and fixing barbed G.I. wire fencing above the Compound Wall at P.G. Centre Chikka Aluvara Campus belongs to Mangalore University – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:34(2016)

**ವಿಷಯ :** Providing and laying Interlocks to the Approach Road from Entrance Gate to Library Building at University College, Mangalore – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:35(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಮುಖ್ಯ ನೀರು ಸರಬರಾಜು ಯೋಜನೆಯ 0.5MGDಸಾಮರ್ಥ್ಯದ ನೀರು ಶುದ್ಧೀಕರಣ ಕೇಂದ್ರದ ಫಿಲ್ಟರ್ ಬೆಡ್‌ನ್ನು ಮರು ವ್ಯವಸ್ಥೆ ಮಾಡುವುದು – ದರಪಟ್ಟಿ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:36(2016)

**ವಿಷಯ :** Construction of Rest Room with attached toilet & Store room facility for the Pump Operating Staff of Munnur Pump House pertaining to the Major Water Supply system of Mangalore University, Mangalagangothri – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:37(2016)

**ವಿಷಯ :** Prevention of water leakage in Boys Hostel Dining block at Mangalore University campus, Mangalagangothri call-2 - ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.4:38(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಚೇರಿಗಳಲ್ಲಿ ಹಾಗೂ ಅತಿಥಿಗೃಹಗಳಲ್ಲಿ ಅಳವಡಿಸಲಾಗಿರುವ ಹವಾನಿಯಂತ್ರಕ ಯಂತ್ರಗಳ ವಾರ್ಷಿಕ ನಿರ್ವಹಣೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.4:39(2016)

ವಿಷಯ : Construction of Botony block for Mangalore university, Mangalagangothri - providing and fixing water supply materials (Qtn) – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.4:40(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ International Hostel, Class room Complexಮತ್ತು Auditorium Interior work ಗಳ ಕಾಮಗಾರಿ.

ಅಂದಾಜು ಮೊತ್ತ ರೂ. 48,45,00,000.00

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.4:41(2016)

ವಿಷಯ : Supplying, installation, commissioning of package Airconditioner unit to the Animal House at Mangalore University Campus.
Est. Rs. 32,50,000.00

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.4:42(2016)

ವಿಷಯ : External Electrification to the Animal House for CARRT Project at Mangalore University Campus.
Estimate Cost Rs. 8,75,000.00

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:43(2016)

**ವಿಷಯ :** Repair work of the Principal Quarters at FMKMC College, Madikeri – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:44(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಆಡಳಿತ ಕಟ್ಟಡಕ್ಕೆ ವಿದ್ಯುತ್‌ಚಾಲಿತ ಲಿಫ್ಟ್‌ನ್ನು ಅಳವಡಿಸುವುದು ಅಂದಾಜು ಮೊತ್ತ ರೂ. 51.00 ಲಕ್ಷಗಳು

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:45(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವಿಶ್ವಮಂಗಳ ವಿದ್ಯಾಸಂಸ್ಥೆಗೆ ಆವರಣ ಗೋಡೆ ನಿರ್ಮಾಣ ಕಾಮಗಾರಿ– ಅಂದಾಜು ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 18.75 ಲಕ್ಷಗಳು

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.4:46(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಜೋಡು ರಸ್ತೆಯ ಎಡ ಮತ್ತು ಬಲ ಬದಿಗೆ ದಾರಿ ದೀಪದ ಅಲಂಕಾರಿಕ ಕಂಬಗಳನ್ನು (cast iron decorative Post) ಅಳವಡಿಸುವ ಕಾಮಗಾರಿಗೆ ಟೆಂಡರು ಅನುಮೋದನೆ ನೀಡುವ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 44.20 ಲಕ್ಷಗಳು

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 10.06.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ.4:47(2016)

**ವಿಷಯ :** Dr. Mini K Johnನೋಂದಣಿ ಸಂ. 9212137, ಎಂ.ಡಿ.ಎಸ್. ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಇವರಿಗೆ ಎಂ.ಡಿಎಸ್. ಸ್ನಾತಕೋತ್ತರ ಪದವಿಯ ಪರೀಕ್ಷಾ ಫಲಿತಾಂಶ ಶೇಕಡವಾರು ಅಂಕ ಹಾಗೂ ಪಡೆದ ದರ್ಜೆ ವಿವರ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಈಗ ಅಸ್ತಿತ್ವದಲ್ಲಿರುವ range of marks ಏನಿದೆ ಅವುಗಳನ್ನು ಅಳವಡಿಸಲು

ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:48(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ P.G. Diploma in Yogic Science ಕೋರ್ಸನ್ನು ಅಧ್ಯಯನ ಮಾಡಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:49(2016)

**ವಿಷಯ :** ಶೈಕ್ಷಣಿಕ ವರ್ಷ 2016–17 ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ, ವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ ಇಲ್ಲಿ ನಡೆಸಲ್ಪಡುವ ಕೋರ್ಸುಗಳಿಗೆ ವಿದ್ಯಾರ್ಥಿ ಪರಿಮಿತಿ ನಿಗದಿ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:50(2016)

**ವಿಷಯ :** ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸಂಯೋಜನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:51(2016)

**ವಿಷಯ :** ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ ಸಿಲಿಕಾನ್ ಕಾಲೇಜ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸಂಯೋಜನೆ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:52(2016)

**ವಿಷಯ :** ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹೊಸದಗಿ ಪ್ರಾರಂಭವಾಗಲಿರುವ M.Sc. Medical Physics ಕೋರ್ಸಿನ ಪ್ರವೇಶಾತಿ ಶುಲ್ಕದ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:53(2016)

**ವಿಷಯ :** ಪದವಿ ಮಟ್ಟದ ಇಂಟೀರಿಯರ್ ಡಿಸೈನ್ ಆ್ಯಂಡ್ ಡೆಕೋರೇಷನ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:54(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರ ನೀಡಿರುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:55(2016)

**ವಿಷಯ :** ಡಾ. ಪೌಲ್ ಜೆರಾಲ್ಡ್ ಅಕ್ವಿನಸ್, ಸಹ ಪ್ರಾಧ್ಯಾಪಕರು, ಇವರಿಗೆ ವಿದೇಶ ಪ್ರಯಾಣದ ನಿಮಿತ್ತ ಕೇಂದ್ರಸ್ಥಾನ ಬಿಡಲು ಘಟನೋತ್ತರ ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:56(2016)

**ವಿಷಯ :** ಡಾ. ಪಾರ್ವತಿ ಎ. ಎ., ಪ್ರಾಂಶುಪಾಲರು, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರಿಗೆ ದಿನಾಂಕ 23.07.2016 ರಿಂದ 26.07.2016 ರವರೆಗೆ Poland ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಮೇಲ್ಕಾಣಿಸಿದ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಮತ್ತು ದಿನಾಂಕ 20.07.2016 ರಿಂದ 30.07.2016ರವರೆಗೆ ಅಧಿಕೃತ ಕಾರ್ಯನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸದರಿಯವರು ಸಮ್ಮೇಳನದ ಶೈಕ್ಷಣಿಕ ಉಪಯುಕ್ತತೆಯ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:57(2016)

**ವಿಷಯ :** ಘಟಕ ಕಾಲೇಜಿನ ಬಿಡುವು ರಜಾ ಅವಧಿಯಲ್ಲಿ ಡಾ. ಅಮ್ಮಾಳು ಕುಟ್ಟಿ ಎಂ. ಪಿ., ಸಹ ಪ್ರಾಧ್ಯಾಪಕರು, ಆಂಗ್ಲ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ವಿದೇಶಕ್ಕೆ ಪ್ರಯಾಣಿಸುವ ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ** : ಸಿಬ್ಬಂದಿ ಸಾ.ಸ.4:58(2016)

**ವಿಷಯ** : ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯಕ್ಕೆ ಪೂರ್ಣ ಕಾಲಿಕ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ** : ಪರೀಕ್ಷಾಂಗ ಸಾ.ಸ.4:59(2016)

**ವಿಷಯ** : ತತ್ಕಾಲ್ ಯೋಜನೆಯಡಿಯಲ್ಲಿ ಪದವಿ ಪ್ರಮಾಣ ಪತ್ರವನ್ನು ನೀಡಲು ಶುಲ್ಕ ವಿಧಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ವಿಳಂಬವಾಗಿ ಪದವಿ ಪ್ರಮಾಣ ಪತ್ರಕ್ಕೆ ಅರ್ಜಿಸಲ್ಲಿಸುವವರಿಗೆ ತತ್ಕಾಲ್ ಯೋಜನೆಯಡಿಯಲ್ಲಿ ನಿಗದಿತ ಶುಲ್ಕ ಮತ್ತು ದಂಡ ಶುಲ್ಕದೊಂದಿಗೆ ತತ್ಕಾಲ್ ಶುಲ್ಕ ರೂ.5,000/– ವನ್ನು ನಿಗದಿಪಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ** : ಡಿಇವಿ ಸಾ.ಸ.4:60(2016)

**ವಿಷಯ** : ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ತೆಂಕನಿಡಿಯೂರನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಪರಿಗಣಿಸುವ ಬಗ್ಗೆ ರಚಿಸಿದ ತಜ್ಞರ ಸಮಿತಿ ಸಲ್ಲಿಸಿರುವ ವರದಿಯನ್ನು ಸರಕಾರದ ನಿರ್ಣಯಕ್ಕಾಗಿ ತುರ್ತಾಗಿ ಸಲ್ಲಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ** : ಡಿಇವಿ ಸಾ.ಸ.4:61(2016)

**ವಿಷಯ** : BRNS CRP – CARERಕೇಂದ್ರದ ಪ್ರಯೋಗಾಲಯಗಳಿಗೆ ಉಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆಗಳ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ದಿನಾಂಕ 25.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ** : ಡಿಇವಿ ಸಾ.ಸ.4:62(2016)

**ವಿಷಯ** : DST – PURSE ಪ್ರಯೋಗಾಲಯಕ್ಕೆ ಕಂಪ್ಯೂಟರ್ಸ್ ಮತ್ತು ಪ್ರಿಂಟರ್ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ.4:63(2016)

**ವಿಷಯ :** 2015–16ನೇ ಸಾಲಿಗೆ ಕಂಪ್ಯೂಟರ್ ಸ್ಟೇಶನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾಟ್ರೇಡ್ಜ್) ಖರೀದಿಸಲು ನೀಡಿದ ಧಾರಣಾ ಗುತ್ತಿಗೆ ಅವಧಿಯನ್ನು ವಿಸ್ತರಿಸಿದ ಬಗ್ಗೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.4:64(2016)

**ವಿಷಯ :** 2016–17ನೇ ಸಾಲಿಗೆ ಕಂಪ್ಯೂಟರ್ ಸ್ಟೇಶನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾಟ್ರೇಡ್ಜ್) ಖರೀದಿಸಲು ಧಾರಣಾ ಗುತ್ತಿಗೆದಾರರನ್ನು ನಿಗದಿಗೊಳಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ದಿನಾಂಕ 12.05.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.4:65(2016)

**ವಿಷಯ :** 2016–17ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಹಾಗೂ ಘಟಕ ಕಾಲೇಜುಗಳಿಗೆ ವಿದ್ಯಾರ್ಥಿ ಮೇಜು ಮತ್ತು ಕುರ್ಚಿಗಳ ಖರೀದಿ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.4:66(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು / ಕಚೇರಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.4:67(2016)

**ವಿಷಯ :** ಮಂಗಳೂರು ವಿಶ್ವವಿದ್ಯನಿಲಯದ ವಿವಿಧ ವಿಭಾಗ / ಕಚೇರಿಗಳಿಗೆ ಅಗತ್ಯವಿರುವ ಕಂಪ್ಯೂಟರ್‌ಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.4:68(2016)

ವಿಷಯ : ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಶುಚಿತ್ವ ವ್ಯವಸ್ಥೆಯ ಗುತ್ತಿಗೆ ಅವಧಿ ವಿಸ್ತರಣೆ – ಘಟನೋತ್ತರ ಅನುಮೋದನೆಗಾಗಿ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:69(2016)

ವಿಷಯ : ದಿನಾಂಕ 01.01.2016ರ ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯ/ ಸ್ನಾತಕೋತ್ತರ ಕೇಂದ್ರ / ಘಟಕ ಕಾಲೇಜುಗಳ ಬೋಧಕರಿಗೆ ಮುಂಬಡ್ತಿ – ಸ್ಕ್ರೀನಿಂಗ್–ಕಂ–ಇವ್ಯಾಲ್ಯುವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ.4:70(2016)

ವಿಷಯ : ಮೇ/ಜೂನ್ 2016ರ ಬಿ.ಎ. ದ್ವಿತೀಯ ಸೆಮಿಸ್ಟರ್ ಮನಃಶಾಸ್ತ್ರ ಪರೀಕ್ಷೆಯನ್ನು ದಿನಾಂಕ 16.05.2016ಕ್ಕೆ ಹಿಂದೂಡಿ ಬದಲಾವಣೆ ಮಾಡಿರುವ ಬಗ್ಗೆ ಶ್ರೀ ಭುವನೇಂದ್ರ ಕಾಲೇಜು ಕಾರ್ಕಳ ಇವರ ಮಾಹಿತಿಯ ಕೊರತೆಯಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗದಿರುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರ ಭವಿಷ್ಯಕ್ಕೆ ತೊಂದರೆಯಾಗದಂತೆ ಸದರಿ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಮಾಡಲು ನಿರ್ಧರಿಸಲಾಯಿತು ಹಾಗೂ ಈ ಮರುಪರೀಕ್ಷೆಗೆ ತಗಲುವ ವೆಚ್ಚವನ್ನು ಪ್ರಾಂಶುಪಾಲರಿಂದ ಭರಿಸುವುದು ಮತ್ತು ಇಂತಹ ಪರಕರಣ ಮರುಕಳಿಸದಂತೆ ಎಚ್ಚರಿಕೆ ಪತ್ರ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:71(2016)

ವಿಷಯ : ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ ಯುಜಿಸಿಯ ವೃತ್ತಿ ಆಧಾರಿತ ಕೋರ್ಸು Aviation and Hospitality Management ಕೋರ್ಸು ಪ್ರಾರಂಭಿಸುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ.4:72(2016)

ವಿಷಯ : ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಮಂಗಳೂರು ಇನ್ ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಎಂಬ ವಿದ್ಯಾಸಂಸ್ಥೆಗೆ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗೆ ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 21.06.2016**

ನಿರ್ಣಯ : ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನುಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |